B.L.D.E.ASSOCIATION'S
S. B. ARTS AND K. C. P. SCIENCE P.U. COLLEGE,
VIJAYAPUR – 586103.
ACCREDITED AT THE "A" LEVEL BY NAAC
Phone: (08352) – 261208, (08352) 262770 Extension. 2247
Fax: 08352 – 261766 E-mail: sbkcppu@gmail.com

Centenary Year 2010



# 2018-19

## ವಿಜಯ ಕರ್ನಾಟಕ ಪತ್ರಿಕೆ ಪ್ರಾಯೋಗಿಕ ಭೇಟಿ

ವಿಷಯ

# ಸಂಪಾದಕೀಯ

## ಸುದ್ದಿ–ಬರವಣಿಗೆ–ವಿಶ್ಲೇಷಣೆ




ಮಾರ್ಗದರ್ಶಕರು

ಶೃತಿ ಚಿನಗುಂಡಿ
ಮುಖ್ಯಸ್ಥರು
ಸಮೂಹ ಸಂವಹನ ಮತ್ತು
ಪತ್ರಿಕೋದ್ಯಮ ವಿಭಾಗ

ವರದಿ ಸಿದ್ಧಪಡಿಸಿದ ವಿದ್ಯಾರ್ಥಿಗಳು



ಶೋಭಾ ಕೋಳಿ | ಬಿಸ್ಮಿಲ್ಲಾ ಪಿಂಜಾರ | ದೀಪಾಲಿ ಬಿರುಣಗಿ



**B.L.D.E.A's**

**S.B Arts and K.C.P Science Vijayapur**

**Department of Journalism and Mass Communication**

**Project Report 2018-19**

**Subject: Editorial Section- News Writing Skills and Review**

Journalism and Mass Communication Department Students, Shubha Koli, Bissmilla Pinjara and Deepali Jirungi were Visit the Vijyakarnataka Newspaper Office.

If there is one thing many newspapers around the world seem to have in common, it is the rigid adherence to the Inverted Pyramid as a style of news presentation. Editors justify the Inverted Pyramid as an effective way of informing readers very quickly about what happened, when, where, why, to whom it happened and how, without losing their interest and attention. Though there is nothing intrinsically wrong with this approach, it has created the impression that all the news has to be reported in the first paragraph, hence the use of summary leads.

IQAC, Co-ordinator
S.B.Arts & K.C.P.Science College,
Vijayapur.

Shruti Chingundi
Head of Department
Journalism & Mass Communication
S.B.Arts & K.C.P Science College,
Vijayapur

Principal,
S.B. Arts and KCP Science College
VIJAYAPUR

Scanned with CamScanner

B.L.D.E.ASSOCIATION'S
S. B. ARTS AND K. C. P. SCIENCE COLLEGE,
SHRI B. M. PATIL ROAD (Solapur Road), VIJAYAPUR
ACCREDITED at 'A' Grade in 3rd Cycle by NAAC
Phone: (08352) – 261766, (08352) 262770 Extn. 2223, 2224
Fax: 08352 – 261766 E-mail: bldeasbkcp@gmail.com Web: www.bldeasbkcp.org

REF./ ಕ್ರಮಾಂಕ : ________ Date /ದಿನಾಂಕ: 15-2-2018

ಸ್ಥಾನಿಕ ಸಂಪಾದಕರು

ವಿಜಯ ಕರ್ನಾಟಕ

ವಿಜಯಪುರ.

ಮಾನ್ಯರೇ,

ವಿಷಯ: ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಅಧ್ಯಯನಕ್ಕಾಗಿ ನಿಮ್ಮ ಕಚೇರಿಗೆ ಭೇಟಿ ನೀಡುವ ಅನುಮತಿ ಕೋರಿ.

VIJAY KARNATAKA
CTS NO. 413/2, WARD NO. 4
PREMASHRI TOWERS, 2nd FLO
M.G. ROAD, OPP. BSNL OFFI
VIJAYPURA - 586101

ನಮ್ಮ ಮಹಾವಿದ್ಯಾಲಯದ ಬಿಎ ಪತ್ರಿಕೋದ್ಯಮ ಪದವಿ ತರಗತಿಯಲ್ಲಿ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳಿಗೆ ಪಠ್ಯದ ಜತೆಗೆ ಪ್ರಾಯೋಗಿಕ ಅನುಭವದ ಅಗತ್ಯವಿದೆ. ಹೀಗಾಗಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ನಿಮ್ಮ ಮಾಧ್ಯಮ ಕಚೇರಿಗೆ ಭೇಟಿ ನೀಡಲು ಉತ್ಸುಕರಾಗಿದ್ದಾರೆ. ದಯವಿಟ್ಟು ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಧನ್ಯವಾದಗಳೊಂದಿಗೆ

ತಮ್ಮ ವಿಶ್ವಾಸಿ

ಡಾ.ಕೆ.ಜಿ.ಪೂಜಾರಿ
ಪ್ರಾಚಾರ್ಯರು

S. M. Chinagundi
ಶೃತಿ ಚಿನಗುಂಡಿ
ಪ್ರಾಧ್ಯಾಪಕರು, ಪತ್ರಿಕೋದ್ಯಮ ವಿಭಾಗ

PRINCIPAL,
B.L.D.E.A's S.B. Arts & K.C.P. Science College, Vijayapur.

IQAC, Co-ordinator
S.B.Arts & K.C.P.Science College,
Vijayapur.

S.M Chinagundi
Head of Department
Journalism & Mass Communication
S.B.Arts & K.C.P Science College,
Vijayapur

Scanned with CamScanner

# ಮೊದಲ ಮಾತು

ಪತ್ರಿಕೋದ್ಯಮ ಸಾಗರ. ಮೊಗೆದಷ್ಟು ತೆರೆದುಕೊಳ್ಳುವ ವಿಶಾಲ ಜಗತ್ತು. ಪ್ರಜಾ ಭುತ್ವದ ನಾಲ್ಕನೇ ಅಂಗ. ಉತ್ತಮ ಸಮಾಜಕ್ಕಾಗಿ ಉಪಯುಕ್ತ ಮಾಹಿತಿ ನೀಡುವ ಸಾ ನ, ಮಾರ್ಗ. ಅಕ್ಷರದಲ್ಲೇ ಹೊಸ ಲೋಕ ಸೃಷ್ಟಿಸುವ, ಪರಿಚಯಿಸುವ ಅಮೋಘ ವಿಸ್ಮಯ.

ಸಮ ಸಮಾಜಕ್ಕೆ ದೃಶ್ಯ, ಮುದ್ರಣ, ಬಾನುಲಿ, ಅಂತರ್ಜಾಲ ತಮ್ಮದೇಯಾದ ಶಿಷ್ಟ ಕೊಡುಗೆ ನೀಡುತ್ತಿವೆ. ಮಂಗಳೂರು ಸಮಾಚಾರದಿಂದ ಹಿಡಿದು ಇಂದಿನ ನ ರೂಪದ ಪತ್ರಿಕೆಗಳವರೆಗೂ ತನ್ನದೇಯಾದ ವೈಶಿಷ್ಟ್ಯವಿದೆ. ತಂತ್ರಜ್ಞಾನ ಬೆಳೆದಂತೆಲ್ಲ ಪ ಕೋದ್ಯಮವೂ ಮಗ್ಗಲು ಬದಲಿದೆ. ಉದ್ಯಮ ರೂಪ ಪಡೆದಿದೆ ಎಂಬ ಆರೋಪದ ಇದ್ದಿದ್ದ ನಾದರೂ ನೇರ, ನಿರ್ಭೀತ, ಸಕಾಲಕ್ಕೆ ಸರ್ಕಾರನ್ನು ಎಚ್ಚರಿಸುವ ಕಾಯಕ ನಡೆದೇ ಇದೆ. ಸುದ್ದಿ ನೀಡುವ ಶೈಲಿಯೂ ಬದಲಾಗಿದೆ. ಸುದ್ದಿ ನೋಡುವ ದೃಷ್ಟಿಕೋನವೂ ಅತ್ತಿತ್ತ ಾಲಿದೆ. ಇಂಥ ಸಂದಿಗ್ಧ ಹಾಗೂ ಮುಂದುವರಿದ ಸಮಯದಲ್ಲಿ ಪತ್ರಿಕೋದ್ಯಮ ಅಧ್ಯ ುನ ಕೂಡ ಬಹು ದೊಡ್ಡ ಸವಾಲು. ಇತರೆ ವಿಷಯಗಳಂತೆ ಕೇವಲ ಪುಸ್ತಕಗಳಲ್ಲಿನ ಧ್ಯಾ ುಗಳನ್ನು ಓದಿ ಪರೀಕ್ಷೆ ಎದುರಿಸಿದರೆ ಮುಗಿಯಿತು ಎನ್ನುವ ಸದವಕಾಶ ಪತ್ರಿಕೋದ್ಯಮಕ್ಕೆ ಇ . ನಾಲ್ಕು ಗೋಡೆಗಳ ನಡುವೆ ಕುಳಿತು ಓದು, ಪರೀಕ್ಷೆ ಬರೆಯುವುದರ ಜತೆಗೆ ಪ್ರಾಯೋ ಗಿಕ ತರಬೇತಿಯೂ ಅಷ್ಟೇ ಮುಖ್ಯ.

ವೃತ್ತಿಪರ ಪತ್ರಕರ್ತರಿಗೆ ಪತ್ರಿಕೋದ್ಯಮದ ಇತಿಹಾಸದ ಜತೆಗೆ ಸಮಕಾಲಿನ ಬ ಲಾವಣೆ, ಮಾರುಕಟ್ಟೆಯಲ್ಲಿ ಆಗುತ್ತಿರುವ ಏರಿಳಿತ, ಸುದ್ದಿ ಬರವಣಿಗೆಯಲ್ಲಿನ ನವೀನತೆ, ಜಾಹೀರಾತಿನ ಕ್ರಿಯಾಶೀಲತೆ, ಪುಟ ವಿನ್ಯಾಸದ ಹೊಸ ರೂಪತೆ, ಛಾಯಾಚಿತ್ರಗಳ ಕಣ್ಮನ ಸ ೆತ, ಸುದ್ದಿ ಸಂಗ್ರಹದ ಸಮಸ್ಯೆ ಹಾಗೂ ಸವಾಲುಗಳ, ವರದಿಗಾರನ ಪ್ರಶ್ನಾರ್ಥಕ ಗೊಂ ಲಗಳು. ಇವೆಲ್ಲವುಗಳನ್ನು ಮೀರಿ ಮುಂಜಾನೆ ಬಿಸಿ ಕಾಫಿ ಜತೆಗೆ ಮನೆಯ ಟೇಬಲ್ ೀಲೆ ಬಂದು ಬೀಳುವ ಬಿಸಿ ಬಿಸಿ ಸುದ್ದಿಗಳ ಹೂರಣ ನೋಡುವುದೇ ಅಚ್ಚರಿ.

ಈ ಎಲ್ಲ ಅಚ್ಚರಿ, ತವಕ, ವಿಸ್ಮಯ, ಹೊಸ ಜಗತ್ತಿನ ಪ್ರಾಯೋಗಿಕ ಅಧ್ಯಯನ ನಮ್ಮ ವಿದ್ಯಾರ್ಥಿಗಳು ತೆರಳಿದ್ದು ವಿಜಯ ಕರ್ನಾಟಕ ಪತ್ರಿಕೆಯ ವಿಜಯಪುರ ಕಚೇ ಗೆ. ಅಲ್ಲಿ ಪತ್ರಿಕಾ ಪ್ರಕಟಣೆಯಿಂದ ಹಿಡಿದು ಮುದ್ರಣವಾಗುವವರೆಗೂ ನಡೆಯುವ ಎಲ್ ಪ್ರಕ್ರಿಯೆಗಳನ್ನು ಕಣ್ಣಾರೆ ಕಂಡು ಬೆರಗುಗೊಂಡ ಕ್ಷಣ ಅವಿಸ್ಮರಣೀಯ. ಪುಟ ನ್ಯಾಸ, ಸಂಪಾದಕೀಯ, ವರದಿಗಾರಿಕೆ, ತಲೆಬರಹ, ಅಡಿಬರಹ ಸೇರಿದಂತೆ ಪತ್ರಿಕೋ ್ಯಮದ ವಿವಿಧ ಆಯಾಮಗಳನ್ನು ಪ್ರಾಯೋಗಿಕವಾಗಿ ಕಲಿತದ್ದು ವಿಶೇಷ. ಅದೆಲ್ಲದಕ್ಕೂ ಅಕ್ಷ ರೂಪ ನೀಡಿದ್ದಾರೆ.

ಶೃತಿ ಚಿನಗುಂಡಿ

ಮುಖ್ಯಸ್ಥರು, ಸಮೂಹ ಸಂವಹನ ವ ್ತು ಪತ್ರಿಕೋದ್ಯಮ

**Head of Department**
Journalism & Mass Communication
S.B.Arts & K.C.P Science College,
Vijayapur

**IQAC, Co-ordinator**
S.B.Arts & K.C.P.Science College,
Vijayapur.

Principal,
S.B. Arts and KCP Science College
VIJAYAPUR

Scanned with CamScanner


# ಪಠ್ಯವಿಷಯ

- ಸುದ್ದಿಯ ಒಳ ಹೂರಣ
- ಕಣ್ಮನ ಸೆಳೆಯುವ ಪುಟ ವಿನ್ಯಾಸ
- ಬಣ್ಣಗಳಿಂದ ಕಂಗೊಳಿಸುವ ಪುಟ

Cont---

Scanned with CamScanner

# ಸುದ್ದಿಯ ಒಳ ಹೂರಣ



ಪೋಟೋ ಕ್ಯಾಪ್ಸ್ನ್ (ಅಡಿಬರಹ) : ವಿಜಯ-ಕರ್ನಾಟಃ ಪತ್ರಿಕೆಯ ಸಿಬ್ಬಂದಿಗಳೊಂದಿಗೆ ಪತ್ರಿಕೆಯ ವಿವಿಧ ಆಯಾಮಗಳ ಬಗ್ಗೆ ಚರ್ಚೆ.

ಪತ್ರಿಕೋದ್ಯಮ ಎನ್ನುವುದು ನಾಲ್ಕು ಗೋಡೆಗಳಿಗೆ ಸಿಮೀತವಾ ।ರುವುದಲ್ಲ. ಎಂದು ಒಂದು ದಿನ ಸಮೂಹ ಸಂವಹನ ಮತ್ತು ಪ ್ರಿಕೋದ್ಯಮ ವಿಭಾಗದ ಪ್ರಾಧ್ಯಾಪಕರೊಂದಿಗೆ ನಮ್ಮ ವಿಭಾಗಗದ ಎಲ್ಲ ವಿ ್ಯಾರ್ಥಿಗಳು ವಿಜಯಪುರದಲ್ಲಿರುವ ವಿಜಯ ಕರ್ನಾಕ ಕಛೇರಿಗೆ ಭೇಟಿ ನೀ ಡಿದೆವು.

Cont---

Scanned with CamScanner

ವಿಜಯ-ಕರ್ನಾಟಕ ಕಛೇರಿಯ ಸಿಬ್ಬಂದಿಗಳು ನಮ್ಮನೆಲ್ಲ ಖುಷಿಯಿಂದಲೇ ಬರಮಾಡಿಕೊಂಡರು. ನಾವೆಲ್ಲರೂ ಒಬ್ಬೊಬ್ಬರಾಗಿ ನಮ್ಮ ಪರಿಚಯ ಮಾಡಿಕೊಂಡು ಸ್ಥಾನಿಕ ಸಂಪಾದಕರೊಂದಿಗೆ ಮಾತುಕತೆ ನಡೆಸಿ ಪ್ರತಿಯೊಂದು ವಿಭಾಗದ ಮಾಹಿತಿಯನ್ನು ಪ್ರಾಧ್ಯಾಪಕರೊಂದಿಗೆ ಸಂಪೂರ್ಣವಾಗಿ ತಿಳಿದುಕೊಂಡೆವು. ಕ್ಲಾಸ್‌ರೂಮ್‌ನಲ್ಲಿ ನಮ್ಮ ಶಿಕ್ಷಕ ಪಾಠಮಾಡುತ್ತ ಪ್ರಾಯೋಗಿಕ ಅಧ್ಯಯನದ ಬಗ್ಗೆ ಮಾಹಿತಿಯನ್ನು ಹೇಳುತ್ತಿದ್ದರು. ಆದರೂ ನಮಗೆ ಕಾಲೇಜಿನಲ್ಲಿ ಇಕ್ವಿಪ್‌ಮೆಂಟ್ಸ್‌ಗಳ ಕೊರತೆಯಿತ್ತು. ಆದ್ದರಿಂದ ಅಧ್ಯಯನದ ಅಗತ್ಯ ವಿದ್ದುದ್ದರಿಂದ ಕಛೇರಿಗೆ ಭೇಟಿ ನೀಡಿದೆವು.

ಸ್ಥಾನಿಕ ಸಂಪಾದಕರೊಂದಿಗೆ ಸಂವಾದ ನಡೆಸಿದೆವು. ಪ್ರತಿಯೊಂದು ದಿನ ಪತ್ರಿಕೆಗಳಲ್ಲಿ ಬರುವಂತಹ ಸುದ್ದಿಗಳು ಹೊಸ-ಹೊಸ ವಿಷಯಗಳನ್ನು ಹೊತ್ತು ನಿಂತಿರುತ್ತವೆ. ಪತ್ರಿಕೆಗಳನ್ನು ಓದುವುದೆಂದರೇ ಪುಟಗಳನ್ನು ತಿರುಗಿಸುದಲ್ಲ. ಅದರಲ್ಲೂ ಪತ್ರಿಕೋದ್ಯಮದಲ್ಲಿ ಬದುಕು ಕಟ್ಟಿಕೊಳ್ಳುವವರು ಪ್ರತಿಯೊಂದು ಅಕ್ಷರವನ್ನು ಬಿಡದೆ ಓದಬೇಕಾಗುತ್ತದೆ.

ಆದ್ದರಿಂದ ಪತ್ರಿಕೋದ್ಯಮ ವಿದ್ಯಾರ್ಥಿಗಳು ಪತ್ರಿಕೆ ಓದುವ ಶೈಲಿಯನ್ನು ಬದಲಾಯಿಸಿಕೊಳ್ಳಬೇಕು. ಪತ್ರಿಕೆಗಳಲ್ಲಿರುವ ಪ್ರತಿಯೊಂದು ವಾಕ್ಯ, ಶೀರ್ಷಿಕೆ. ಲೀಡ್ ಎಲ್ಲವನ್ನು ಗಮನಿಸುವುದು ತುಂಬಾ ಮುಖ್ಯವಾದದ್ದು.

ಒಂದು ಸುದ್ದಿಯನ್ನು ಓದುವಾಗ ಅದರ ಹಿನ್ನೆಲೆ ಮುನ್ನೆಲೆಯನ್ನು ತಿಳಿದಿರಬೇಕಾಗುತ್ತದೆ.

ವರದಿಗಾರಿಕೆಯ ವಿಷಯದ ಬಗ್ಗೆ ಕುಡ ಚರ್ಚೆ ನಡೆಯಿತು. ವರದಿಗಳನ್ನು ಮಾಡುವ ಮುನ್ನ ಏನು? ಎಲ್ಲಿ? ಏಕೆ? ಯಾವಾಗ? ಹೇಗೆ?

Cont...

ಸಂಭವಿಸಿತು ಎಂಬ ಪರಿಪೂರ್ಣ ಮಾಹಿತಿಯ ಕೂಡ ನಮಗಿರಬೇಕಾಗಿರುತ್ತದೆ. ಅಲ್ಲದೆ ಸುದ್ದಿಯ ಮಗ್ಗಲುಗಳನ್ನು ಸಹ ನಾವು ಗಮನಿಸಬೇಕಾಗುದು. ಪತ್ರಿಕಾಗೋಷ್ಠಿಗಳನ್ನು ಕೂಡ ಆಹ್ವಾನ ಮಾಡುತ್ತಾರೆ. ಅದಕ್ಕೂ ಮುಂಚೆ ಹಿಂದಿನ ದಿನ ಪತ್ರಿಕಾಗೋಷ್ಠಿಯ ಆಹ್ವಾನ ಲೆಟರ್ ಕಛೇರಿಗೆ ಬಂದಿರುತ್ತದೆ. ಮುಖ್ಯ ವರದಿಗಾರರು ಪತ್ರಿಕಾಗೋಷ್ಠಿಗೆ ಯಾರು ಹೋಗಬೇಕೆಂಬುದನ್ನು ನಿರ್ಧರಿಸುತ್ತಾರೆ.

ಹಾಗೇ ಸುದ್ದಿಯನ್ನು ಬರೆಯುವ ಮುನ್ನ ಸುದ್ದಿಯ ಸ್ಥಳ ಸಮಯಕ್ಕೆ ಹೆಚ್ಚಿನ ಮಹತ್ವ ನೀಡತಕ್ಕದ್ದು ಹೌದು. ಸುದ್ದಿ ಯಾಗಲು ಘಟನೆಗಳು ಎಷ್ಟು ಮುಖ್ಯವೋ ಅಷ್ಟೇ ಬರಹ ಕೂಡ ಮುಕ್ಯವಾದ ಪಾತ್ರ ವಹಿಸುವುದು. ಅಕ್ಷರಗಳ ಮಹತ್ವ ಪ್ರತಿಯೊಬ್ಬ ಪತ್ರಕರ್ತ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳು ಹೊಂದಿರಲೇಬೇಕು.

ಸುದ್ದಿಯಲ್ಲಿ ಅಕ್ರಗಳು ಪದಗಳು ವಾಖ್ಯೆಗಳು ಅತ್ಯಂತ ಸ್ಪಷ್ಟವಾಗಿರಬೇಕು. ಮತ್ತು ಓದುಗರಿಗೆ ಮತ್ತು ಓದುಗರಿಗೆ ಸ್ಪಷ್ಟವಾಗಿ ತಿಳಿಯುವಂತಿರಬೇಕು. ಓದುಗರಿಗೆ ಒಮದು ವರದಿ ಗೊಂದಲ ಮೂಡಿಸಬಾರದು. ಒಂದು ಸುದ್ದಿ ಪತ್ರಿಕೆಯಲ್ಲಿ ಮುದ್ರಣಗೊಳ್ಳಬೇಕಾದರೆ, ಮೊದಲು ವರದಿಗಾರ ನಂತರ ಉಪಸಂಪಾದಕ ಕೊನೆಗೆ ಸ್ಥಾನಿಕ ಸಂಪಾದಕರು ಪರಿಶೀಲಿಸುತ್ತಾರೆ.

ಪ್ರತಿಯೊಬ್ಬ ವರದಿಗಾರರು, ಪೇಜ್ ಡಿಸೈನ್‌ರ, ಸಬ್ ಎಡಿಟರ್ಸ್ ಹೀಗೆ ಹಲವಾರು ವಿಭಾಗಗಳು ಪತ್ರಿಕಾ ಕಛೇರಿಗಳಲ್ಲಿರುವುದುಂಟು. ಅದೇ ರೀತಿ ಸುದ್ದಿಗಳನ್ನು ಯಾವ ಪುಟಕ್ಕೆ ಎಲ್ಲಿ ಕಳಿಸಬೇಕುಹಾಕಬೇಕು ಎಂಬುದನ್ನು ಸಹ ನಿರ್ಧರಿಸಲಾಗುವುದುಂಟು. ಸುದ್ದಿಯ ಪ್ರಮುಖ್ಯತೆಯ ಮೇಲೆ ಕೂಡ ಸುದ್ದಿಯನ್ನು ಆಯಾ ಪುಟಕ್ಕೆ ಹಾಕಬೇಕಾಗುತ್ತದೆ ಪತ್ರಿಕೆಯ ಮುಖಪುಟದಲ್ಲಿರುವ ಸುದ್ದಿ ಅದು ಅಂದಿನ ಅತ್ಯಂತ ಪ್ರಮುಖವಾದ

Cont--

Scanned with CamScanner

ಸುದ್ದಿ ಯಾಗಿರುವುದುಂಟು. ವರದಿಗಾರರು ಅತ್ಯಂತ ಎಚ್ಚರಿಕೆಯಿಂದ ತಮ್ಮ ಕೆಲಸವನ್ನು ನಿರ್ವಹಿಸಬೇಕಾಗುತ್ತದೆ. ಯಾವುದೇ ಸುದ್ದಿ ಇರಲಿ, ಅದನ್ನು ಅಚ್ಚಿಗೆ ಕಳುಹಿಸುವ ಮುನ್ನ ಮರಳಿ-ಮರಳಿ ಓದಿ ಸುದ್ದಿಯಲ್ಲಿರುವ ದೋಷಗಳನ್ನು ಹುಡುಕಿ ಸರಿಮಾಡಬೇಕಾಗುತ್ತದೆ.

ಪುಟದಲ್ಲಿರುವ ಪ್ರತಿಯೊಂದು ಸುದ್ದಿ ಕೂಡ ಓದುಗರ ಮನವನ್ನು ಸೆಳೆಯುಂತಿರಬೇಕು. ಓದುಗರು ಓದುತ್ತಿದ್ದರೆ ಮರುದಿನ ಅದೇ ಸುದ್ದಿಗಾಗಿ ಹಾತೊರೆಯುತ್ತಿರಬೇಕು. ವರದಿಗಾರರೂ ಹೀಗೆ ಓದುಗರಿಗೆ ಸವಿರುಚಿ ಊಣ ಬಡಿಸಬೇಕಾಗುತ್ತದೆ. ಹಾಗೆ ಒಂದು ವರದಿ ಓದುಗರಿಗೆ ಬೇಸರವನ್ನು ತರಿಸುವಂತಿರಬಾರದು. ಹೀಗೆ ಪತ್ರಿಕೆಯಲ್ಲಿ ಪ್ರತಿಯೊಂದು ಮಾಹಿತಿಗಳು ಅಡಕವಾಗಿರುತ್ತವೆ.

ನಾವು ಕ್ಲಾಸ್‌ರೂಮ್ ನಲ್ಲಿ ಕಲಿತಂತ ವಿಷಯಗಳನ್ನು ಪತ್ರಿಕಾ ಕಛೇರಿಯಲ್ಲಿ ಪ್ರಾಯೋಗಿಕವಾಗಿ ನೋಡಿದಾಗ ಅದರ ವಿಷಯ ಪರಿಪೂರ್ಣವಾಗಿ ಪರಿಣಾಮಕಾರಿಯಾಗಿ ತಿಳಿಯಿತು. ಪತ್ರಿಕೋದ್ಯಮ ವಿಷಯವನ್ನು ಹಿಂದೇಟು ಹಾಕುತ್ತಾ ಆಯ್ಕೆ ಮಾಡಿಕೊಂಡಿದ್ದರು. ಅದರಲ್ಲಿ ಕಲಿಯಬೇಕಾಗಿರುವುದು ತಿಳಿಯಬೇಕಾಗಿರುವುದು ತುಂಬಾ ಇದೆ. ನಾವು ಎಷ್ಟೇ ಕಲಿತರು ಕೂಡ ಕಡಿಮೆಯೇ ಒಟ್ಟಿನಲ್ಲಿ ಆಂಯ್ಕೆ ಮಾಡಿಕೊಂಡ ವಿಷಯ ಮನಸ್ಸಿಗೆ ಖುಷಿ ತಂದಿದೆ.

ಬಿಸ್ಮಿಲ್ಲಾ.ಚಾ.ಪೂಜಾರ

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ,

ಬಿ.ಎ. ಮೂರನೇ ಸೆಮಿಸ್ಟರ್

Shruti Hingundi


Head of Department
Journalism & Mass Communication
S.B.Arts & K.C.P Science College,
Vijayapur

IQAC, Co-ordinator
S.B.Arts & K.C.P.Science College,
Vijayapur.

Principal,
S.B. Arts and KCP Science College
VIJAYAPUR

Scanned with CamScanner

# ಕಣ್ಮನ ಸೆಳೆಯುವ ಪುಟ ವಿನ್ಯಾಸ



ಅಡಿಬರಹ: ಪತ್ರಿಕೆಯ ಕಛೇರಿಯಲ್ಲಿ ವಿದ್ಯಾರ್ಥಿಗಳೆಲ್ಲ ಇನ್‌ಡಿಸೈನ್, ಪೋಟೋಶಾಪ್ ತಂತ್ರಾಂಶ ಹಾಗೂ ಇನ್ನಿತರ ಮಾಹಿತಿ ಗಮನಿಸುತ್ತಿರುವುದು.

ಪತ್ರಿಕೋದ್ಯಮ ಎಂಬ ಹೆಸರೇ ಸೂಚಿಸುವಂತೆ ಇದೊಂದು ಅವಕಾಶಗಳ ಆಗರ. ಇಂದು ಅತಿ ಹೆಚ್ಚು ಅವಕಾಶಗಳನ್ನು ಹೊತ್ತು ನಿಂತಿರುವುದು. ಪತ್ರಿಕೋದ್ಯಮದಲ್ಲಿನ ಈ ವಿಷಯ ನನಗೆ ತಡವಾಗಿಯೇ ಬೆಳಕಿ ಬಂತು ನಾನು ಪತ್ರಿಕೋದ್ಯಮ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದರು, ಕತ್ತಲಿನಿಂದ ಬೆಳಕಿನೆಡೆಗೆ ಬರಲು ಸಮಯಾವಕಾಸ ಬೇಕಾಯಿತು.

Cont--

Scanned with CamScanner

ನಂತರ ನಾವು ನಮ್ಮ ವಿಭಾಗದ ಪ್ರಾಧ್ಯಾಪಕರೊಂದಿಗೆ ಏಪ್ರೀಲ್ ತಿಂಗಳಿನಲ್ಲಿ ಕಛೇರಿಯತ್ತ ದಾಪುಗಾಲು ಹಾಕಿದೆವು. ಏಕೆಂದರೆ ನಮಗೆ ಪ್ರಾಯೋಗಿಕ ಅಧ್ಯಯನದ ಅಗತ್ಯತೆಯು ಇತ್ತು. ಆದ ಕಾರಣ ವಿಜಯಪುರದ ವಿಜಯ-ಕರ್ನಾಟಕ ಪತ್ರಿಕೆಯನ್ನು ಸಂಪೂರ್ಣ ಮಾಹಿತಿ ತಿಳಿಯಲು ಭೇಟಿ ನೀಡಿದೆವು.

ನಂತರ ಸ್ಥಾನಿಕ ಸಂಪಾದಕರ ಪರಿಚಯದೊಂದಿಗೆ ಪತ್ರಿಕೋದ್ಯಮದ ಬುತ್ತಿಯನ್ನು ನಮ್ಮ ಮುಂದೆ ಬಿಚ್ಚಿಟ್ಟರು. ಅದರಲ್ಲಿಯ ತುಣುಕುಗಳನ್ನು ಒಂದೊಂದಾಗಿ ಪ್ರಾಯೋಗಿಕವಾಗಿ ತಿಳಿಸುತ್ತ ಬಂದರು. ನಾವು ಪತ್ರಿಕಾ ಕಛೇರಿಯನ್ನು ನೋಡಿದಾಗ ಮನಸ್ಸಿಗೆ ಸಂತೋಷವೇ ಆಯಿತು. ಕಛೇರಿಯನ್ನೆಲ್ಲ ಒಮ್ಮೆ ತಿರುಗಾಡಿ ನೋಡಿಯೆ ಬಿಟ್ಟೆವು. ಪ್ರತಿಯೊಂದು ಮೂಲೆಯನ್ನು ಸಹ ಗಮನಿಸಿದೆವು ಅಲ್ಲಿರುವ ಸಿಬ್ಬಂದಿಗಳು ಸಹ ನಮ್ಮೊಂದಿಗೆ ಸಹಕರಿಸಿದರು.

ಪತ್ರಿಯೊಂದು ಕಂಪ್ಯೂಟರ್‌ಗಳ ಹಿಂದೆ ಪ್ರತಿಯೊಂದು ಜಿಲ್ಲೆಯ ಹೆಸರುಗಳಿದ್ದವು ಏಕೆಂದರೆ ಆ ಜಿಲ್ಲೆಯ ಎಡಿಷನ್ ಅಲ್ಲಿಯೇ ರೆಡಿ ಆಗುತ್ತವೆ. ಅದಕ್ಕಾಗಿ ಅಲ್ಲಿ ಜಿಲ್ಲೆಯ ಹೆಸರುಗಳನ್ನು ಹಾಕಿರುವುದನ್ನು ಗಮನಿಸಿದೆವು. ಹಾಗೆ ಅಲ್ಲಿರುವ ಸ್ಥಾನಿಕರ ಸಂಪಾದಕರ ಕಛೇರಿಯನ್ನು ಗಮನಿಸಿದೆವು. ಹಾಗೆ ಎಲ್ಲ ದಿನಾಂಕದ ಪೇಪರ್ ಕಟಿಂಗ್‌ಗಳನ್ನು ಸಹ ಗಮನಿಸಿದೆವು.

ಪತ್ರಿಕೋದ್ಯಮದ ಬಗ್ಗೆ ಹೇಳುದ ನಮ್ಮ ಪ್ರಚೋದನೆ ಮಾಡುವ ಪ್ರಯತ್ನವನ್ನು ಮಾಡಿದರು. ಲೇಖನಿ ಎಂಬ ಖಡ್ಗದಿಂದ ನೀವು ಸಮಾಜವನ್ನು ರೂಪಿಸುವ ಉತ್ತಮ ಪರ್ತಕರ್ತರಾಗಬೇಕೆಂದರು. ಸುದ್ದಿಯಲ್ಲಿರುವ ಪ್ರಮುಖ ಅಂಶಗಳನ್ನು ನಮಗೆ ಉಣಬಡಿಸಿದರು.

Cont--

ಇನ್ ಡಿಸೈನ್

ಇದೊಂದು ಸಾಫ್ಟ್‌ವೇರ್ ಇದನ್ನು ನಮ್ಮ ಉಪನ್ಯಾಸಕಿ ಕ್ಲಾಸ್‌ರೂಮ್ ನಲ್ಲಿ ತಿಳಿಸಿಕೊಟ್ಟಿದ್ದರು. ಇದನ್ನು ನೋಡಿದಾಗ ಇದರ ಬಗ್ಗೆ ಸಂಪೂರ್ಣ ಮಾಹಿತಿ ದೊರೆಯಿತು. ಅಲ್ಲದೇ ದಿನ ಡಿ ಇಡೀ ಪತ್ರಿಕೆಯನ್ನು ಈ ಸಾಫ್ಟ್‌ವೆರ್ ನಲ್ಲಿಯೇ ತಯಾರಿಸುತ್ತಾರೆ. ಎಂಬುದನ್ನು ಗಮನಿಸಿದೆವು. ಅದೇ ರೀತಿ ಅಲ್ಲಿರುವ ಪೇಜ್ ಡಿಸೈನರ್‌ಗಳ ಪುಟವನ್ನು ತಯಾರಿಸುದನ್ನು ಅತೀ ಹತ್ತಿರದಿಂದಲೆ ಗಮನಿಸಿದೆ . ಡಿಸೈನ್ ಮಾಡುವಾಗಲು ಆಯಾ ಸುದ್ದಿಗೆ ಆಯಾ ಮಹತ್ವವನ್ನು ಕೊಡುವುದನ್ನು ಗಮನಿಸಿದೆವು. ಹಾಗೆ ಕಂಪ್ಯೂಟರ್‌ನ ಒಂದು ಮಾಹಿತಿಯನ್ನು ಕೂಡ ಗಮನಿಸಿದೆವು. ಇನ್‌ಡಿಸೈನಲ್ಲಿ ಪತ್ರಿಕೆ ತಯಾರಿಸಲು ಎಂಟು ಕಾಲಂ ಗಳಿರುತ್ತವೆ.

ಆ ಕಾಲಂ ಗಳನ್ನು ಐದು ಕಾಲಂ, ಎರಡು ಕಾಲಂ, ಮೂರು ಕಾಲಂ ಸುದ್ದಿಗಳಾಗಿ ಬೇರ್ಪಡಿಸುವುದನ್ನು ಗಮನಿಸಿದೆವು. ಹಾಗೇ ಪತ್ರಿಕೆಯನ್ನು ಗಮನಿಸಿದಂತೆ ಕೆಲವೊಂದು ಸಲ ಎಂಟು ಕಾಲಂಗಳ ಸುದ್ದಿಯನ್ನು ನಾವು ಓದಿರುವುದುಂಟು.

ಪತ್ರಿಕೋದ್ಯಮದ ಇತಿಹಾಸವನ್ನು ಕೆದಕಿದಾಗ ಆಗ ಇಷ್ಟೊಂದು ಬೆಳವಣಿಗೆಗಳು ಪತ್ರಿಕೋದ್ಯಮದಲ್ಲಿ ಆಗಿರಲಿಲ್ಲ. ಆಗ ಪತ್ರಿಕೆಗಳನ್ನು ಅಚ್ಚು ಮೊಳೆಗಳ ಮೂಲಕ ತಯಾರಿಸುತ್ತಿದ್ದರು. ಆದರೆ ಈಗ ತಂತ್ರಜ್ಞಾನದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗಿ ಬೆಳವಣಿಗೆ ಯಾಗಿರುವುದನ್ನು ನಾವು ಗಮನಿಸಬಹುದು.

Cont--

Scanned with CamScanner

ಕಂಪ್ಯೂಟರಿಕರಣದಿಂದಾಗಿ ಇಂದು ಪತ್ರಿಕೋದ್ಯಮ ಒ ದು ಸುಲಬ ದಾರಿ ಯಾಗಿರುವುದು ತಿಳಿಯಿತು. ಅತೀ ಕಡಿಮೆ ಸಮಯ ದಲ್ಲಿ ನಾವು ಸುದ್ದಿಯನ್ನು ಇದರಿಂದ ತಯಾರು ಮಾಡಬಹುದಾಗಿದೆ. ಒ ದೇ ಒಂದು ಸೆಕೆಂಡಿನಲ್ಲಿ ಸಹ ನಾವು ಇ-ಮೇಲ್‌ಗಳ ಮೂಲಕ ಸುದ್ದಿಯನ್ನು ಕಳುಹಿಸಬಹುದಾಗಿದೆ.

ಹೀಗೆ ಇನ್ ಡಿಸೈನ್ ಸಾಫ್ಟ್‌ವೇರ್ ನಲ್ಲಿ ಎ೩ ಸೈಜ್ ನಲ್ಲಿ ಪತ್ರಿಕೆಗಳನ್ನು ತಯಾರಿಸುತ್ತಾರೆ. ಎ೪ಅನ್ನು ಮ್ಯಾಗಜಿನ್ ಬಳಕೆಗಾಗಿ ಬಳುಸುವುದುಂಟು. ಇದರಿಂದಲೇ ನಮ್ಮ ಪತ್ರಿಕೆಗಳು ಇ ದು ಕಲರ್ ಫುಲ್ಲಾಗಿರುವುದನ್ನು ಗಮನಿಸಬಹುದು. ಇಂದಿನ ವಿಜಯವಾಣಿ ಪತ್ರಿಕೆಯಂತೂ ಹೆಚ್ಚು ಕಲರ್-ಕಲರ್ ಆಗಿರುವುದ ನ್ನ ಕಾಣ ಬಹುದಾಗಿದೆ. ಹೆಚ್ಚು ಪೋಟೋಗಳನ್ನು ಸಹ ನ ವು ಇಲ್ಲಿ ಗಮನಿಸಬಹುದು ಒಟ್ಟಿನಲ್ಲಿ ಕ್ಲಾಸ್ ನಲ್ಲಿ ಮಿಸ್ ಹೇಳಿದ್ದನ ನೋಡುವ ಅವಕಾಶ ಇಲ್ಲಿ ದೊರೆಯಿತು.

**ಪೋಟೋಶಾಪ್**

ಇದು ಕೂಡ ಕಂಪ್ಯೂಡರ್‌ನಲ್ಲಿರುವ ಒಂದು ತಂತ್ರಾ ಶ ಸಾಧನ ಇದನ್ನು ಪೋಟೋಗಳನ್ನು ಸರಿಮಾಡಿಕೊಳ್ಳಲು ಬಳಸು ತ್ತರೆ ಎಂಬ ಮಾಹಿತಿ ಗೋತ್ತಿತ್ತು. ಪ್ರಾಯೋಗಿಕ ಅಧ್ಯಯಣದಿಂದ ಇನ್ನೂ ಪರಿಣಾಮಕಾರಿ ಅಧ್ಯಯನ ತಿಳಿಯಿತು. ಎಷ್ಟೋ ಸಾರಿ ಪೋಟೋ ಗಳಲ್ಲಿರುವ ದೋಷವನ್ನು ಈ ತಂತ್ರಾಂಶ ಸರಿಪಡಿಸುತ್ತ ೆ. ಒಂದು ಪೋಟೋ ಸಾವಿರ ಪದಗಳಿಗೆ ಸಮವೆಂದು ಹೇಳುವುದುಂಟ . ಏಕೆಂದರೆ ನಮ್ಮ ಗ್ರಾಮಗಳು ಇನೂ ಅನಕ್ಷರತೆಯಿಂದ ಕೂಡಿವೆ. ಹಾಗ ಅಲ್ಲಿರುವ

Cont--

ಜನ ಇಂತ ಪೋಟೋಗಳ ಮೂಲಕವು ಸುದ್ದಿಯನ್ನು ಗ್ರಹಿಸುವಂತವರಾಗಿರುತ್ತಾರೆ. ಒಟ್ಟಿನಲ್ಲಿ ಪ್ರಾಯೋಗಿಕವಾಗಿ ಈ ತಂತ್ರಾಂಶಗಳ ಮಾಹಿತಿ ತಿಳಿದುಕೊಳ್ಳಲು ತುಂಬಾ ಪರಿಪೂರ್ಣವಾಯಿತು ಎನ್ನುವುದೊಂದೆ ಖುಷಿ. ಅದಕ್ಕಾಗಿ ವಿಭಾಗದ ಪ್ರಾಧ್ಯಾಪಕರಿಗೆ ಧನ್ಯವಾದ ತಿಳಿಸುತ್ತೆನೆ.

ಶೋಭಾ ಕೋಳಿ

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ

ಬಿ.ಎ. ಮೂರನೆ ಸೆಮಿಸ್ಟರ್

Shruti Chingundi


Head of Department
Journalism & Mass Communication
S.B.Arts & K.C.P Science College,
Vijayapur

IQAC, Co-ordinator
S.B.Arts & K.C.P.Science College,
Vijayapur.

Principal,
S.B. Arts and KCP Science College
VIJAYAPUR

Scanned with CamScanner

# ಬಣ್ಣಗಳಿಂದ ಕಂಗೊಳಿಸುವ ಪುಟ



ಅಡಿಬರಹ: ಕಂಪ್ಯೂಟರ್‌ನಲ್ಲಿ ಎಡಿಷನ್‌ಗಳ ಮಾಹಿತಿಯನ್ನು ತಿಳಿಸುತ್ತಿರುವುದು.

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಷಯದ ಆಯ್ಕೆಯಲ್ಲಿ ನನಗೂ ಸ್ವಲ್ಪ ಗೊಂದಲವೇ ಇತ್ತು. ಏಕೆಂದರೆ ಪ್ರಿಕೋದ್ಯಮವೆಂದರೆ ಏನೆಂದು ತಿಳಿಯದ ನನಗೆ ಇದು ಸರ್ವೇ ಸಾಮಾನ್ಯ.

Cont---

Scanned with CamScanner

ವಿಭಾಗದ ಪ್ರಾಧ್ಯಾಪಕಿ ಶೃತಿ ಚಿನಗುಂಡಿ ಅವರು ಈ ವಿಷಯದ ಬಗ್ಗೆ ನನಗೆ ಸಂಪೂರ್ಣ ಮಾಹಿತಿಯನ್ನು ಕೊಟ್ಟಿದ್ದರು.

ಗೊಂದಲುಗಳು ಮನಸ್ಸಿನಲ್ಲಿ ಉಳಿದು ಕೊಂಡಿದ್ದವು. ಏಕೆಂದರೆ ಈ ವಿಷಯದ ಬಗ್ಗೆ ನನಗೆ ಮುಂಚೆ ಅಷ್ಟೊಂದು ಮಾಹಿತಿ ಇರಲಿಲ್ಲ. ಮೊದಮೊದಲು ಕ್ಲಾಸ್ ಗಳಲ್ಲಿ ನಮ್ಮ ಮೇಡಂ ಪತ್ರಿಕೆಗಳನ್ನು ತಂದು ದಿನವೂ ಅದರ ಬಗ್ಗೆ ಒಂದು ಪರಿಪೂರ್ಣ ಮಾಹಿತಿಯನ್ನು ನೀಡುತ್ತಿದ್ದರು. ಆಗ ನನಗೆ ಅನ್ನಿಸಿದ್ದು ಒಂದು ಪತ್ರಿಕೆ ತಯಾರಿಸಲು ಸಾವಿರಾರು ಜನರ ಕೈಗಳು ಇಲ್ಲಿ ಸೇರಿರುತ್ತವೆ. ಎಂದು. ಅಬ್ಬಾ! ನಾನು ಪತ್ರಿಕೋದ್ಯಮ ಮಾಡಿದ್ದು ಸಾರ್ಥಕವಾಯಿತು ಎಂದುಕೊಂಡೆ. ಇಲ್ಲದಿದ್ದರೆ ಎಷ್ಟೋ ವಿಷಯಗಳು ನನ್ನ ಕಣ್ಮರೆ ಯಾಗುತ್ತಿದ್ದವು.

ಅದಕ್ಕಾಗಿ ಪ್ರಾಚಾರ್ಯರ ಅನುಮತಿ ಮೇರೆಗೆ ವಿಭಾಗದ ಉಪನ್ಯಾಸಕಿ ನಮ್ಮನ್ನು ವಿಜಯಪುರದ ಪತ್ರಿಕಾ ಕಾರ್ಯಾಲಯಕ್ಕೆ ಕರೆದುಕೊಂಡು ಹೋದರು. ನಾವು ದಿನವು ಕ್ಲಾಸಿನ ನಾಲ್ಕು ಗೋಡೆಗಳ ಮಧ್ಯ ಪಾಠವನ್ನು ಕೇಳುತ್ತಿದ್ದೆವು, ಅಂದು ನನಗೆ ಪ್ರಾಗಿಕ ಅಧ್ಯಯನದ ವಿಷಯ ತಿಳಿಯುವ ಖುಷಿ. ಮನಸ್ಸಿಗ್ಗೆ ಎಲ್ಲಿಲ್ಲದ ಸಂತೋಷ. ಕ್ಲಾಸ್ ನಲ್ಲಿ ಮೇಡಂ ಯಾವಾಗಲು ಹೇಳುತ್ತಿದ್ದರು. ನಾವು ಬರಿ ಪುಸ್ತಕದಲ್ಲಿರುವ ಬದನೆಕಾಯಿಯನ್ನು ಕಲಿಸುತ್ತೇನೆಂದು. ಆಗ ಪ್ರಾಯೋಗಿಕ ಅಧ್ಯಯನವನ್ನು ನೋಡಿದಾಗ ಆ ಮಾತು ನಿಜವೆನ್ನಿಸಿತು.

ಇಂದಿನ ಪತ್ರಿಕೆಗಳ ಒಂದು ಮಾಹಿತಿಯನ್ನು ನೋಡಿದಾಗ ನಾವು ಪ್ರಾಯೋಗಿಕವಾಗಿ ಕಲಿಯಬೇಕಾದ್ದು ಬಹಳ. ಕಲಿಯ ಬೇಕಾಗಿರುವುದು ಇನ್ನೂ ತುಂಬಾ ಇದೆ. ಎನ್ನುವುದು ಅರ್ಥವಾಯಿತು. ಒಂದು ಪತ್ರಿಕೆಯಲ್ಲಿ ರಾಜಕೀಯ, ಕಲೆ-ಸಂಸ್ಕೃತಿ, ಶಿಲ್ಪಕಲೆ, ಕೃಷಿ, ಶಿಕ್ಷಣ, ಆರೋಗ್ಯ,

Cont --

Scanned with CamScanner

ವ್ಯಂಗ್ಯಚಿತ್ರ, ನಳ-ಪಾಕ, ಮಹಿಳಾ ಸಂಬಂಧಿ ಲೇಖನ, ಸಂಪಾದಕೀಯ, ಆಟೋಟ, ಜಾಹೀರಾತು, ಮಕ್ಕಳ ಕಥೆ, ಕವಿತೆ, ಕವನ ಗ್ರಾಮೀಣ ಸುದ್ದಿಗಳು ಹೀಗೆ ನಮ್ಮ ಜೀವನದ ದಿನನಿತ್ಯದ ನಿತ್ಯೋಪಯೋಗಿ ವಸ್ತುಗಳನ್ನು ಸಹ ನಾವು ಇಂದು ಪತ್ರಿಕೆಗಳಲ್ಲಿ ಕಾಣಬಹುದಾಗಿದೆ. ಅದರಲ್ಲೂ ಮಹಿಳೆಯರ ಸೌಂದರ್ಯ ವರ್ಧಕಗಳ ಸ್ಪೆಷಲ್ ಪುಟಗಳನ್ನು ಸಹ ಗಮನಿಸಬಹುದು.

ಇಷ್ಟೆಲ್ಲ ಕೆಲಸಗಳನ್ನು ನಿರ್ವಹಿಸಲು ಇಲ್ಲಿ ಸಾವಿರಾರು ಜನರ ಕೂಡ ಕೆಲಸ ಮಾಡುತ್ತಾರೆ ಪ್ರತಿಯೊಂದು ವಿಭಾಗಗಳನ್ನು ಮಾಡಿ ಪ್ರತಿಯೊಂದು ವಿಭಾಗಕ್ಕೂ ಪ್ರತ್ಯೇಕ ಉಪಸಂಪಾದರು ಇರುತ್ತಾರೆ ಜಿಲ್ಲೆಗೆ ಸಂಬಂಧಿಸಿದಂತೆ ಜಿಲ್ಲಾ ವರದಿಗಾರರು ಇಲ್ಲಿ ಕೆಲಸಗಳನ್ನು ಮಾಡುತ್ತಾರೆ. ತಾಲೂಕಾ ಪ್ಲೇಸ್ ಗಳಲ್ಲಿ ತಾಲೂಕಾ ವರದಿಗಾರರಿರುವುದನ್ನು ನಾವು ಕಾಣಬಹುದಾಗಿದೆ.

ಅಷ್ಟಾಗ್ಯೂ ಈ ಪತ್ರಿಕೆಗಳು ಹೆಚ್ಚಿನ ಮಹತ್ವವನ್ನು ರಾಜಕೀಯಕ್ಕಾಗಿಯೇ ಮೀಸಲಿಟ್ಟಿರುವುದನ್ನು ಕಾಣಬಹುದು. ದಿನದ ಪ್ರತಿಯೊಂದು ಪತ್ರಿಕೆಗಳಲ್ಲಿ ರಾಜಕೀಯ ಸುದ್ದಿಯೇ ಮೊದಲನೇ ಸ್ಥಾನವನ್ನು ಗಿಟ್ಟಿಸಿಕೊಂಡಿರುವುದನ್ನು ನೋಡಬಹುದು. ಆದರೆ ಮಹಿಳೆಯರಿಗೆ ಸಂಬಂಧಿಸಿದ ಲೇಖನಗಳುನ ಪ್ರಮುಖ ಪುಟದಲ್ಲಿ ನೋಡುವುದು ಕಡಿಮೆ.

ಇನ್ನೂಳಿದ ಕೆಲವೊಂದು ಲೇಖನಗಳನ್ನು ನೋಡಿದಾಗ ಪ್ರತಿ ವಾರವು ಪ್ರತಿಯೊಂದು ಸಂಚಿಕೆ ಬರುವುದುನ್ನು ಗಮನಿಸಬಹುದು. ಅಲ್ಲದೆ ಏಜೆನ್ಸಿ ಸುದ್ದಿಗಳು ಸಹ ನಾವು ಪತ್ರಿಕೆಗಲಲ್ಲಿ ನೋಡಬಹುದಾಗಿದಾಗಿ ಈ ಸುದ್ದಿ ಸಂಸ್ಥೆಗಳಿಂದ ಸುದ್ದಿಗಳನ್ನು ಪತ್ರಿಕೆಗಳು ಕೊಂಡುಕೊಳ್ಳುತ್ತವೆ.

Cont...

Scanned with CamScanner

ಎರಡು-ನಾಲ್ಕು ಜಿಲ್ಲೆಗಳಿಗೆ ಸೇರಿದಂತೆ ಈ ಸುದ್ದಿ ಸಂಸ್ಥೆಗಳು ತಮ್ಮ ಕೆಲಸವನ್ನು ನಿರ್ವಹಿಸುತ್ತವೆ. ಸುದ್ದಿ ಸಂಸ್ಥೆಗಳು ಜಿಲ್ಲೆಗಳ ಮೇಲೆಯೇ ಅವಲಂಬಿತವಾಗಿರುತ್ತವೆ.

ಭಾರತದಲ್ಲಿ ಪತ್ರಿಕೋದ್ಯಮ ಒಂದು ಗೌರವಯುತವಾದ ವೃತ್ತಿಯಾಗಿದೆ. ಆಗಿನ ಕಾಲದಲ್ಲಿ ಪತ್ರಕರ್ತರಾಗುವವರು ಓದಲು ಬರೆಯಲು ಬಂದವರೆಲ್ಲ ಪತ್ರಕರ್ತರಾಗಬಹುದಿತ್ತು. ಆದರೆ ಇಂದು ಪತ್ರಿಕೋದ್ಯಮವನ್ನು ಕಲಿಯಲು ಪದವಿಯಲ್ಲಿಯೇ ಶಿಕ್ಷಣ ನೀಡಲು ಕಾಲೇಜು ಸಂಸ್ಥೆಗಳಿವೆ. ಅಲ್ಲದೇ ಇಂದು ಪದವಿ ಪತ್ರಿಕೋದ್ಯಮ ಕೂಡ ಕಡ್ಡಾಯವಾಗಿದೆ.

ಪತ್ರಿಕೆಯ ಪುಟದಲ್ಲಿರುವ ಪ್ರತಿಯೊಂದು ಮಾಹಿತಿಯನ್ನು ಗಮನಿಸಿದಾಗ ಪ್ರತಿ ಸುದ್ದಿಯಲ್ಲಿರುವ ವಿಭಿನ್ನತೆಯನ್ನು ಇಲ್ಲಿ ಗುರುತಿಸಬಹುದಾಗಿದೆ. ಈ ಕಲೆ ಓದುವವರಿಗೆ ಮಾತ್ರ ಕರಗತವಾಗಿರುವುದುಂಟು.

ಸಂಪಾದಕೀಯ ವಿಭಾಗಕ್ಕೆ ಬಂದರೆ ಪ್ರತಿ ದಿನವು ಒಬ್ಬೊಬ್ಬ ವ್ಯಕ್ತಿಗಳು ಒಂದೊಂದು ಕಾಲಂಗಳನ್ನು ಬರೆಯುವುದನ್ನು ಗಮನಿಸಬಹುದು. ಕಾಲಂಗಳು ರಾಜ್ಯದ್ಯಂತ ಪ್ರಕಟವಾಗುತ್ತವೆ. ಅಲ್ಲಿ ಸಾರ್ವಜನಿಕರ ಅಭಿಪ್ರಾಯಗಳಿಗು ಕೂಡ ಸ್ಥಳಾವಕಾಶವನ್ನು ನೀಡಿರುತ್ತಾರೆ. ಅಲ್ಲಿ ಯಾರೂ ಬೇಕಾದರೂ ಕೂಡ ತಮ್ಮ ಅಭಿಪ್ರಾಯಗಳನ್ನು ಬಿಂಬಿಸಬಹುದಾಗಿದೆ.

ಇಷ್ಟೇಲ್ಲ ಮಾಹಿತಿಗಳನ್ನು ಕ್ಲಾಸ್ ರೂಮ್‌ನಲ್ಲಿ ಕಲಿತಿದ್ದರು ಪತ್ರಿಕಾ ಕಾಯಾಲಯದಲ್ಲಿ ಪ್ರಾಯೋಗಿಕವಾಗಿ ನೋಡಿದಾಗ ಮನಸ್ಸಿಗೆ ಖುಷಿ ಎನ್ನಿಸಿತು. ಪತ್ರಿಕೋದ್ಯಮದ ಆಯ್ಕೆ ಒಳ್ಳೆಯದೆನ್ನಿಸಿತು. ಪತ್ರಿಕೋದ್ಯಮದಲ್ಲಿ

Cont..

Scanned with CamScanner

ಮುಂದುವರೆಯಬೇಕೆಂದು ನನ್ನ ನಿರ್ಧಾರವನ್ನು ಸಹ ನಾನು ಬದಲಿಸಿದೆ. ನಾನು ಪತ್ರಿಕೋದ್ಯಮ ವಿಷಯ ಆಯ್ಕೆ ಮಾಡಿಕೊಳ್ಳಲು ಸಹಕರಿಸಿದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾದ ( )ಪನ್ಯಾಸಕಿಗೆ ಚಿರಋಣಿ.

Deepali

ದೀಪಾಲಿ ಬಿ ಣಗಿ

ಸಮೂಹ ಸಂವಹನ ಮತ್ತು ಪತ್ರಿ ೋದ್ಯಮ ವಿಭಾಗ

ಬಿ.ಎ. ಐದನೆ ಸೆಮಿಸ್ಟರ್

Shruti Chingundi

Head of Department
Journalism & Mass Communication
S.B.Arts & K.C.P Science College,
Vijayapur

IQAC, Co-ordinator
S.B.Arts & K.C.P.Science College,
Vijayapur.

Principal,
S.B. Arts and KCP Science College
VIJAYAPUR

Scanned with CamScanner

| Name of the Students | Roll No | Register no | Sign |
|---|---|---|---|
| 1) Deepali. A. Bisunagi | 01 | A1650231 | Deepali |
| Bismilla. c. pinjar | 162 | A1760828 | Pinjar |
| Shobha S. koli | 14 | A1750954 | Sk |

Shruti chingundi

**Head of Department**
Journalism & Mass Communication
S.B.Arts & K.C.P Science College,
Vijayapur

**IQAC, Co-ordinator**
S.B.Arts & K.C.P.Science College,
Vijayapur.

Principal,
S.B. Arts and KCP Science College
VIJAYAPUR

Scanned with CamScanner